ಶಿಕ್ಷಣದ ಹಕ್ಕು

ಸರ್ವ ಶಿಕ್ಷಣ ಅಭಿಯಾನ

ಎಲ್ಲರೂ ಕಲಿಯೋಣ–ಎಲ್ಲರೂ ಬೆಳೆಯೋಣ

ದಿನಾಂಕ:08.10.2015

ಸಂಖ್ಯೆ: ಸಶಿಅ/ಆ ಚ/.ವಿ.ಕೈ.ದಿ/2014-15

## ಜ್ಞಾಪನ

**ವಿಷಯ:**– ರಾಜ್ಯದ ಎಲ್ಲಾ ಶಾಲೆಗಳಲ್ಲಿ ಸ್ವಚ್ಛ ವಿದ್ಯಾಲಯ ಶಿಬಿರವನ್ನು ಹಮ್ಮಿಕೊಳ್ಳುವುದರ ಬಗ್ಗೆ.

**ಉಲ್ಲೇಖ;** 1. MHRD. ಭಾರತಸರ್ಕಾರ.ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ವಿಭಾಗ, ಶಾಸ್ತ್ರಿಭವನ ಹೊಸದೆಹಲಿ ರವರ ಇ-ಮೇಲ್ ಪತ್ರದ ಸಂಖ್ಯೆ: ಡಿಓ ಸಂಖ್ಯೆ F 27/01/2015-EE.16 ದಿನಾಂಕ:01-10-2015

2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪ್ರಾ & ಪ್ರೌ ಶಿಕ್ಷಣ) ಇಲಾಖೆ ರವರ ಪತ್ರದ ಸಂಖ್ಯೆ: ಇಡಿ300 ಮಾಹಿತಿ 2014, ದಿನಾಂಕ :06-10-2015

*@*@*@*@*@*

MHRD. ಭಾರತಸರ್ಕಾರ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ವಿಭಾಗ, ಶಾಸ್ತ್ರೀ ಭವನ ಹೊಸದೆಹಲಿ ರವರು ದೇಶದ ಎಲ್ಲಾ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಶಿಕ್ಷಣಕಾರ್ಯದರ್ಶಿಗಳ ಜೊತೆದಿನಾಂಕ: 28-09-2015 ರಂದು ನಡೆಸಿದ ವಿಡಿಯೋ ಕಾನ್ಫರೆನ್ಸ್‌ನಲ್ಲಿ ದಿನಾಂಕ:01-10-2015 ರಿಂದ ದಿನಾಂಕ: 31-10-2015 ರವರೆಗೆ ರಾಜ್ಯದ ಎಲ್ಲಾ ಶಾಲೆಗಳಲ್ಲಿ ಸ್ವಚ್ಛ ವಿದ್ಯಾಲಯ ಶಿಬಿರಗಳನ್ನು ಸ್ಥಾಪಿಸಿ, ಬಹಳ ಅರ್ಥಪೂರ್ಣವಾಗಿ **"ಅಕ್ಟೋಬರ್ ತಿಂಗಳನ್ನು ಸ್ವಚ್ಛತಾ ಮಾಸಾಚರಣೆ"** ಎಂದು ಕರೆದು ಈ ಕೆಳಕಂಡ ಚಟುವಟಿಕೆಗಳನ್ನು ಶಾಲೆಗಳಲ್ಲಿ ಹಮ್ಮಿಕೊಂಡು ಮಕ್ಕಳಲ್ಲಿ ಸ್ವಚ್ಛತಾ ಮನೋಭಾವನೆಯನ್ನು ಬೆಳೆಸಲು ಆದೇಶಿಸಿದೆ. ಆದರೆ ಶಾಲೆಗಳಲ್ಲಿ ದಸರಾ ರಜೆ ಇರುವುದರಿಂದ ಈ ಕಾರ್ಯಕ್ರಮವನ್ನು ನವೆಂಬರ್ ಮೊದಲನೇ ವಾರ ದವರೆಗೂ ವಿಸ್ತರಿಸಿ ಆಚರಿಸಲು ತಿಳಿಸಿದೆ.

**ಶಾಲೆಗಳಲ್ಲಿ ಹಮ್ಮಿಕೊಳ್ಳಬೇಕಾದ ಚಟುವಟಿಕೆಗಳು**

1. ಪ್ರತಿದಿನ ಶಾಲಾ ಕೂಟದಲ್ಲಿ ವಿದ್ಯಾರ್ಥಿಗಳಿಗೆ ಗಾಂಧಿಜೀಯವರು ಸ್ವಚ್ಛತೆಯ ಬಗ್ಗೆ ತಿಳಿಸಿರುವ ವಿಚಾರ ಧಾರೆಗಳನ್ನು ಕುರಿತು ಮಾತನಾಡುವಂತೆ ಕ್ರಮ ಕೈಗೊಳ್ಳುವುದು.
2. ತರಗತಿಯ ಕೊಠಡಿಗಳು, ಪ್ರಯೋಗಾಲಯ ಹಾಗೂ ಗ್ರಂಥಾಲಯಗಳ ಸ್ವಚ್ಛತೆ ಮಾಡಿಸುವುದು.
3. ಶಾಲೆಯ ಸುತ್ತಲಿರುವ ಕಾಪೌಂಡ್ ಹಾಗೂ ಶಾಲಾ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು.
4. ಶಾಲೆಯಲ್ಲಿರುವ ಶೌಚಾಲಯ ಹಾಗೂ ಕುಡಿಯುವ ಶುದ್ಧನೀರು, ನೀರಿನ ಪ್ರದೇಶ ಇವುಗಳಸ್ವಚ್ಛತೆಕಾಪಾಡುವುದು.
5. ಶಾಲೆಯಲ್ಲಿರುವ ಶೌಚಾಲಯದ ಬಳಕೆಯ ಬಗ್ಗೆ ಮಕ್ಕಳಿಗೆ ಮಾಹಿತಿ ನೀಡುವುದು.
6. ಶೌಚಾಲಯ ಬಳಸಿದ ನಂತರ ಹಾಗೂ ಊಟಕ್ಕೆ ಮುನ್ನ ಮಕ್ಕಳು ಸೋಪಿನಿಂದ ಕೈ ತೊಳೆಯವಂತೆ ವ್ಯವಸ್ಥೆ ಮಾಡುವುದು.
7. ಅಡುಗೆ ಕೋಣೆ, ದಾಸ್ತಾನು ಕೊಠಡಿಗಳ ಸ್ವಚ್ಛತೆ ಕಾಪಾಡುವುದು
8. ಶಾಲಾ ಆಟದ ಮೈದಾನವನ್ನು ಶುಚಿಗೊಳಿಸುವುದು.
9. ಶಾಲಾ ಕೈತೋಟವನ್ನು ಉತ್ತಮ ರೀತಿಯಲ್ಲಿ ನಿರ್ವಹಿಸುವುದು.
10. ಶೌಚಾಲಯ ಬಳಸುವ ಬಗ್ಗೆ ಮಕ್ಕಳ ವರ್ತನೆಯಲ್ಲಿ ಬದಲಾವಣೆ ತರುವುದು.
11. ಸ್ವಚ್ಛತೆ, ಆರೋಗ್ಯ ಹಾಗೂ ನೈರ್ಮಲ್ಯದ ಕುರಿತು ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ, ಚರ್ಚಾ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ (ಪೇಂಟಿಂಗ್) ಮುಂತಾದ ಸ್ಪರ್ಧೆಗಳನ್ನು ಏರ್ಪಡಿಸುವುದು.
12. ಸ್ವಚ್ಛತಾ ಕಾರ್ಯಕ್ರಮದಡಿಯಲ್ಲಿ ಮಕ್ಕಳಿಗಾಗಿ ಆಟೋಟ ಹಾಗೂ ಇತರೆ ದೈಹಿಕ ಚಟುವಟಿಕೆಗಳನ್ನು ಶಾಲೆಗಳಲ್ಲಿ ಹಮ್ಮಿಕೊಳ್ಳುವುದು.
13. ಸ್ವಚ್ಚತಾ ಶೀರ್ಷಿಕೆಯಾಧಾರಿತ, ನೈರ್ಮಲ್ಯದ ನೀತಿ ಕಥೆಗಳನ್ನು ಹಾಗೂ ಪದ್ಯಗಳನ್ನು ಮಕ್ಕಳಿಂದ ರಚಿಸುವುದು.
14. ಸ್ವಚ್ಛತೆಗೆ ಸಂಬಂಧಿಸಿದಂತೆ ಬೀದಿನಾಟಕ, ನೃತ್ಯ, ಗೊಂಬೆಯಾಟ, ಹಾಡುಗಾರಿಕೆ ಮತ್ತು ಇತರ ಸಹಪಠ್ಯಚಟುವಟಿಕೆಗಳ ಸ್ಪರ್ಧೆಗಳನ್ನು ಹಮ್ಮಿಕೊಳ್ಳುವುದು.

ಸರ್ವ ಶಿಕ್ಷಣ ಅಭಿಯಾನ
1790
9/10/2015

9/10/2015.

15. ಶಾಲಾ ಸಂಸತ್ತನ್ನು ರಚಿಸಿ, ವಿದ್ಯಾರ್ಥಿಗಳೇ ಸ್ವಚ್ಛ ವಿದ್ಯಾಲಯ ಕಾರ್ಯಕ್ರಮದ ಮೇಲುಸ್ತುವಾರಿ ಮಾಡುವಂತೆ ಕ್ರಮಕೈಗೊಳ್ಳುವುದು.

ಶಾಲೆಗಳಲ್ಲಿ ಚಟುವಟಿಕೆಗಳ ಅನುಷ್ಠಾನ ಹಾಗೂ ಪ್ರಗತಿಯನ್ನು ಬ್ಲಾಕ್ ಹಂತದ ಅಧಿಕಾರಿಗಳು ನವೆಂಬರ್ ತಿಂಗಳ ಎರಡನೇಯ ವಾರದಲ್ಲಿ (09-11-2015 – 14-11-2015) ಶಾಲೆಗಳಿಗೆ ಭೇಟಿ ನೀಡಿ ಮೇಲ್ವಿಚಾರಣೆ ಮಾಡಿ, ನಂತರ ಮಾರ್ಗದರ್ಶನ ನೀಡುವುದು. ಕೈಗೊಂಡ ಕಾರ್ಯಕ್ರಮದ ದಾಖಲೀಕರಣವನ್ನು ಮಾಡುವುದು ಹಾಗೂ ಪ್ರಗತಿ ಮಾಹಿತಿಯನ್ನು ಸದರಿ ಕಛೇರಿಗೆ ವರದಿ ಮಾಡುವುದು.

UNICEF ಸಂಸ್ಥೆಯು ಇಲಾಖೆ ಸಹಯೋಗದೊಂದಿಗೆ ಕಾರ್ಯನಿರ್ವಹಿಸುತ್ತಿದ್ದು, ಸ್ವಚ್ಛತೆಗೆ ಸಂಬಂಧಿಸಿದಂತೆ ಶಾಲೆಗಳಲ್ಲಿ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲು ಅವಕಾಶ ಮಾಡಿಕೊಡಲಾಗುವುದು.

ಈ ಎಲ್ಲಾ ಚಟುವಟಿಕೆಗಳನ್ನು ಅಕ್ಟೋಬರ್ 2015 ಮಾಹೆಗೆ ಮಾತ್ರ ಸೀಮಿತಗೊಳಿಸದೆ, ವರ್ಷವಿಡೀ ಸ್ವಚ್ಛತೆಯ ಅರಿವು ಮೂಡಿಸುವ ಸಿನಿಮಾ, ಸಾಕ್ಷ್ಯ ಚಿತ್ರ ಪ್ರದರ್ಶನ, ಪ್ರಬಂಧ ಸ್ಪರ್ಧೆ, ಭಾಷಣ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ, ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಜಾಗೃತಿ ಕಾರ್ಯಕ್ರಮ ಹಾಗೂ ಶಾಲಾ ಹಂತದಲ್ಲಿ ಶಾಲಾ ಪರಿಸರವನ್ನು ನಿರ್ಮಲವಾಗಿಟ್ಟುಕೊಳ್ಳುವ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ತನ್ಮೂಲಕ ಪ್ರತಿಯೊಬ್ಬ ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಸ್ವಚ್ಛತೆಯ ಮೌಲ್ಯ ಬೆಳೆಸುವುದು.

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ,

ಅಗತ್ಯ ಕ್ರಮಕ್ಕಾಗಿ,

1. ರಾಜ್ಯದ ಎಲ್ಲಾ ಜಿಲ್ಲೆಯ ಉಪನಿರ್ದೇಶಕರು(ಆ), ಉಪನಿರ್ದೇಶಕರು(ಅಭಿವೃದ್ಧಿ) ಹಾಗೂ ಜಿಲ್ಲಾ ಉಪಸಮನ್ವಯಾಧಿಕಾರಿಗಳು, ಇವರ ಮೂಲಕ ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಸಮನ್ವಯಾಧಿಕಾರಿಗಳು. ಹಾಗೂ ಎಲ್ಲಾ ಪ್ರಾಥಮಿಕ ಶಾಲೆಗಳು ಮತ್ತು ಪ್ರೌಢಶಾಲೆಯ ಮುಖ್ಯ ಶಿಕ್ಷಕರುಗಳಿಗೆ ಅನುಷ್ಠಾನಗೊಳಿಸಲು ಸೂಕ್ತ ಸೂಚನೆ ನೀಡುವುದು.

ಪ್ರತಿಗಳು,

1 ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ಶಿಕ್ಷಣ ಸಚಿವರ ಕಛೇರಿ, ಕೊಠಡಿ ಸಂಖ್ಯೆ 242 , 2ನೇ ಮಹಡಿ, ವಿಧಾನಸೌಧ, ಅಂಬೇಡ್ಕರ್‌ಬೀದಿ, ಬೆಂಗಳೂರು, ರವರಿಗೆ ಕಳುಹಿಸುತ್ತಾ ಸದರಿ ವಿಷಯದ ಬಗ್ಗೆ ಸಚಿವರ ಗಮನಕ್ಕೆ ತರುವುದು

2 ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ , ಬಹುಮಹಡಿ ಕಟ್ಟಡ, ಬೆಂಗಳೂರು-01. ರವರ ಮಾಹಿತಿಗಾಗಿ ಸಲ್ಲಿಸಿದೆ.

3 ಆಯುಕ್ತರು , ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ ಬೆಂಗಳೂರು,ರವರ ಮಾಹಿತಿಗಾಗಿ ಸಲ್ಲಿಸಿದೆ.

4 ಅಪರ ಆಯುಕ್ತರು, ಗುಲ್ಬರ್ಗಾ, ಧಾರವಾಡ ರವರ ಅನುಪಾಲನೆಗಾಗಿ ಸಲ್ಲಿಸಿದೆ.

5 ಕಛೇರಿ ಪ್ರತಿ.